Vol 5 Issue 8 Feb 2016

ISSN No :2231-5063

International Multidisciplinary
Research Journal

# Golden Research Thoughts

Chief Editor
Dr.Tukaram Narayan Shinde

Publisher
Mrs.Laxmi Ashok Yakkaldevi

Associate Editor
Dr.Rajani Dalvi

Honorary
Mr.Ashok Yakkaldevi

## Welcome to GRT

RNI MAHMUL/2011/38595 ISSN No.2231-5063


Golden Research Thoughts Journal is a multidisciplinary research journal, published monthly in English, Hindi & Marathi Language. All research papers submitted to the journal will be double - blind peer reviewed referred by members of the editorial board.Readers will include investigator in universities, research institutes government and industry with research interest in the general subjects.


## Regional Editor

Manichander Thammishetty
Ph.d Research Scholar, Faculty of Education IASE, Osmania University, Hyderabad

## *International Advisory Board*

Kamani Perera
Regional Center For Strategic Studies, Sri Lanka

Janaki Sinnasamy
Librarian, University of Malaya

Romona Mihaila
Spiru Haret University, Romania

Delia Serbescu
Spiru Haret University, Bucharest, Romania

Anurag Misra
DBS College, Kanpur

Titus PopPhD, Partium Christian University, Oradea,Romania

Mohammad Hailat
Dept. of Mathematical Sciences, University of South Carolina Aiken

Abdullah Sabbagh
Engineering Studies, Sydney

Ecaterina Patrascu
Spiru Haret University, Bucharest

Loredana Bosca
Spiru Haret University, Romania

Fabricio Moraes de Almeida
Federal University of Rondonia, Brazil

George - Calin SERITAN
Faculty of Philosophy and Socio-Political Sciences Al. I. Cuza University, Iasi

Hasan Baktir
English Language and Literature Department, Kayseri

Ghayoor Abbas Chotana
Dept of Chemistry, Lahore University of Management Sciences[PK]

Anna Maria Constantinovici
AL. I. Cuza University, Romania

Ilie Pintea,
Spiru Haret University, Romania

Xiaohua Yang
PhD, USA

......More

## *Editorial Board*

Pratap Vyamktrao Naikwade
ASP College Devrukh,Ratnagiri,MS India

R. R. Patil
Head Geology Department Solapur University,Solapur

Rama Bhosale
Prin. and Jt. Director Higher Education, Panvel

Salve R. N.
Department of Sociology, Shivaji University,Kolhapur

Govind P. Shinde
Bharati Vidyapeeth School of Distance Education Center, Navi Mumbai

Chakane Sanjay Dnyaneshwar
Arts, Science & Commerce College, Indapur, Pune

Awadhesh Kumar Shirotriya
Secretary,Play India Play,Meerut(U.P.)

Iresh Swami
Ex - VC. Solapur University, Solapur

N.S. Dhaygude
Ex. Prin. Dayanand College, Solapur

Narendra Kadu
Jt. Director Higher Education, Pune

K. M. Bhandarkar
Praful Patel College of Education, Gondia

Sonal Singh
Vikram University, Ujjain

G. P. Patankar
S. D. M. Degree College, Honavar, Karnataka

Maj. S. Bakhtiar Choudhary
Director,Hyderabad AP India.

S.Parvathi Devi
Ph.D.-University of Allahabad

Sonal Singh,
Vikram University, Ujjain

Rajendra Shendge
Director, B.C.U.D. Solapur University, Solapur

R. R. Yalikar
Director Managment Institute, Solapur

Umesh Rajderkar
Head Humanities & Social Science YCMOU,Nashik

S. R. Pandya
Head Education Dept. Mumbai University, Mumbai

Alka Darshan Shrivastava
Shaskiya Snatkottar Mahavidyalaya, Dhar

Rahul Shriram Sudke
Devi Ahilya Vishwavidyalaya, Indore

S.KANNAN
Annamalai University,TN

Satish Kumar Kalhotra
Maulana Azad National Urdu University



**Address:-Ashok Yakkaldevi 258/34, Raviwar Peth, Solapur - 413 005 Maharashtra, India**
**Cell : 9595 359 435, Ph No: 02172372010 Email: ayisrj@yahoo.in Website: www.aygrt.isrj.org**

Golden Research Thoughts
International Recognition Multidisciplinary Research Journal

ISSN: 2231-5063 Impact Factor : 3.4052(UIF) Volume - 5 | Issue - 8 | Feb - 2016



# ಕರಜಗಿಯ ರಿವಾಯತ್ ಪದಕಾರರು

ಗಣೋರೆ ಜಗನ್ನಾಥ ದತ್ತಾತ್ರೇಯ
ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ-೬

## ಪೀಠಿಕೆ

ಕರಜಗಿ□ ಗ್ರಾಮವು ಇಂದು ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಜತ್ ತಾಲೂಕಿನಲ್ಲಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಇದು □ಜತ್ ಸಂಸ್ಥಾನ□ಕ್ಕೆ ಸೇರಿತ್ತು. ಈ ಗ್ರಾಮ ಮೊಹರಂ ಆಚರಣೆಗೆ ಸಂಸ್ಥಾನ ಕಾಲದಿಂದಲೂ ಪ್ರಸಿದ್ಧವಾಗಿದೆ. ಅಲ್ಲಿಯ ಸುತ್ತ ಮುತ್ತಲಿನ ಗ್ರಾಮದ ಜನರು □ಮೊಹರಂ□ ಅಥವಾ ರಿವಾಯತ್ ಪದಗಳಿಗೆ ಕರಜಗಿಯು □ಗುರುಮನೆ□ಯಾಗಿದೆ ಎಂದು ಹೇಳುತ್ತಾರೆ. ಮೊಹರಂ ಹಬ್ಬದ ಪ್ರತಿದಿನವೂ ಗ್ರಾಮದ ಆರಾಧ್ಯ ದೈವವಾದ ಶ್ರೀ ಜಿನ್ನೇಸಾಬರ ದರ್ಗಾದ ಆವರಣದಲ್ಲಿ ರಿವಾಯತ್ ಪದಗಳನ್ನು ಹಾಡುತ್ತಾರೆ.

ಸಂಸ್ಥಾನ ಕಾಲದಲ್ಲಿ ಅಂದರೆ ಕ್ರಿ.ಶ ೧೮೯೦ ರ ನಂತರದಲ್ಲಿ ಈ ಗ್ರಾಮದಲ್ಲಿ ರಿವಾಯತ್ ಪದಗಳ ರಚನೆ ಪ್ರಾರಂಭವಾಯಿತೆಂದು ಹೇಳಬಹುದು. ಈ ರಿವಾಯತ್ ಪದಗಳನ್ನು ಗ್ರಾಮದ ಇಬ್ಬರು ಪ್ರಮುಖ ವ್ಯಕ್ತಿಗಳಾದ ಶ್ರೀ ಫತ್ತುಮಿಯಾ ಬುಜರುಕ್ ಪಟೇಲ ಮತ್ತು ಶ್ರೀ ಮೀರಾಸಾಬ ಖಾಜೇಸಾಬ ಮುಲ್ಲಾ ಎಂಬುವರಿಂದ ಪ್ರಾರಂಭವಾಯಿತು.

ಈ ಕಾಲದಲ್ಲಿ ಮೊಹರಂ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಮೊಹರಂ ಸಂದರ್ಭದಲ್ಲಿ ತಮ್ಮ ಶಿಷ್ಯ ವರ್ಗದೊಂದಿಗೆ ಹೆಜ್ಜೆಗಳನ್ನು ಹಾಕುತ್ತಾ ಗಟ್ಟಿ ಧ್ವನಿಯಿಂದ ಹಾಡುತ್ತಿದ್ದರು. ಈ ಹಾಡುಗಳು ಸುತ್ತಮುತ್ತಲಿನ ಅನೇಕ ಗ್ರಾಮಸ್ಥರು ಕರಜಗಿ ಗ್ರಾಮಕ್ಕೆ ಬಂದು ಕೇಳುತ್ತಿದ್ದರು. ಈಗ ಇವರ ಸಂತತಿಯವರು ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.



## ಕೌಟುಂಬಿಕ ಹಿನ್ನಲೆ :

ಶ್ರೀ ಫತ್ತುಮಿಯಾ ಪಟೇಲರು ಕರಜಗಿ ಗ್ರಾಮದ ಗೌಡರ ಮನೆತನದವರು. ಜತ್ ಸಂಸ್ಥಾನದ ಅರಸರು ಇವರಿಗೆ ಗ್ರಾಮದ □ಮುಲ್ಕಿ ಪಾಟೀಲ□ಕಿಯನ್ನು ವಹಿಸಿದ್ದರು. ಇವರು ಶ್ರೀಮಂತರಾಗಿದ್ದರೂ ಸಹ ರಿವಾಯತ್ ಪದಗಳಲ್ಲಿ ವಿಶೇಷ ಅಭಿರುಚಿ ಹೊಂದಿದ್ದರು. ಇವರ ತಂದೆಯುವರಾದ ಬುಜರುಕ್ ಪಟೇಲರು ಮೊಹರಂ ಪದಗಳನ್ನು ಹಾಡುತ್ತಿದ್ದರು. ಆದರೆ ಫತ್ತುಮಿಯಾರವರು ರಿವಾಯತ್ ಪದಗಳನ್ನು ಕಟ್ಟಿ ಹಾಡುತ್ತಿದ್ದರು. ಶ್ರೀ ಮೀರಾಸಾಬ ಮುಲ್ಲಾರವರ ಮನೆತನ ಕಡು ಬಡತನದಿಂದ ಕೂಡಿತ್ತು. ಗ್ರಾಮದಲ್ಲಿ ನಡೆಯುವ ಮೊಹರಂ ಹಬ್ಬ ವೀಕ್ಷಿಸುತ್ತಾ ಅಲ್ಲಿ ಹಾಡುವ ರಿವಾಯತ್ ಪದಗಳನ್ನು ಕೇಳುತ್ತಾ, ಅದನ್ನು ಅನುಸರಿಸುತ್ತಾ ತಾವೂ ಸಹ ರಿವಾಯತ್ ಪದಗಳನ್ನು ಏಕೆ ರಚಿಸಬಾರದು ? ಎಂದುಕೊಂಡು ರಿವಾಯತ್ ಪದಗಳನ್ನು ಕಟ್ಟಿ ಹಾಡತೊಡಗಿದರು. ವೃತ್ತಿಯಲ್ಲಿ ಇವರು ಜ್ಯೋತಿಷ್ಯಿಗಳಾಗಿದ್ದರು.

## ರಿವಾಯತ್ ಪದಗಳ ಹಿನ್ನಲೆ :

ಇಸ್ಲಾಂ□ ಮತ ಸ್ಥಾಪಕರಾದ □ಮಹಮ್ಮದ ಪೈಗಂಬರ□ರ ತರುವಾಯ ನಾಲ್ಕು ಜನ □ಖಲೀಪ□ರಲ್ಲಿ ಹಜರತ್ ಅಲಿಯವರು ನಾಲ್ಕನೆಯ ಖಲೀಪರಾಗಿ ಆಯ್ಕೆಗೊಂಡಾಗ ವಿದ್ರೋಹದ ಕಿಡಿ ಹೊತ್ತಿಕೊಂಡಿತು. ಅಲ್ಲಿಯ ಪ್ರಾಂತಾಧಿಕಾರಿಯಾದ □ಹಜರತ್ ಮಾವಿಯಾ□ನು ಹಜರತ್ ಅಲಿಯವರು ಖಲೀಪರೆಂದು ಒಪ್ಪಿಕೊಳ್ಳದೇ ಪ್ರತಿಭಟಿಸಿದನು. ಹಜರತ್ ಅಲಿಯವರು ಕಾಲವಶರಾದ ಬಳಿಕ □ಖಲೀಪ□ ಪಟ್ಟವನ್ನು ಬಲಾತ್ಕಾರವಾಗಿ ಆಕ್ರಮಿಸಿದನು. ತನ್ನ

ತರುವಾಯ ತನ್ನ ಮಗನಾದ ಯಜೀದನೇ ಉತ್ತರಾಧಿಕಾರಿಯೆಂದು ಘೋಷಿಸಿದನು. ಆದರೆ ಅಲ್ಲಿಯ ಸಾಮಾನ್ಯ ಜನತೆಗೆ ಇದು ಇಷ್ಟವಿರಲಿಲ್ಲ. ಜನರು ಪ್ರಜಾಪ್ರಭುತ್ವ ಮಾದರಿಯಲ್ಲಿ ಹಜರತ್ ಅಲಿಯವರ ಹಿರಿಯ ಮಗನಾದ □ಇಮಾಮ ಹಸೇನ್□ ರನ್ನು ತಮ್ಮ ಪ್ರಭು ಹಾಗು ಖಲೀಪರನ್ನಾಗಿಸಲು ಪ್ರಯತ್ನಿಸಿದರು. ಆದರೆ ಯಜೀದನು ಮೋಸದಿಂದ □ಹಸೇನ್□ ನನ್ನು ಕೊಲ್ಲಿಸಿ ತಾನೇ ನಿಜವಾದ ಖಲೀಪನೆಂದು ಆಜ್ಞೆ ಹೊರಡಿಸಿದನು. ಇದರಿಂದ ರೊಚ್ಚಿಗೆದ್ದ ಜನರು ಅನರ್ಹನಾದ □ಯಜೀದ□ನ ಆಜ್ಞೆ ಧಿಕ್ಕರಿಸಿ ಅರೇಬಿಯಾ, ಇರಾನ್, ಇರಾಕ್, ಕೂಫಾದ ಪ್ರಜೆಗಳು ಹಜರತ್ ಇಮಾಮ ಹುಸೇನರಿಗೆ ತಮ್ಮ ಖಲೀಪರೆಂದು ಮನ್ನಣೆ ನೀಡಿದರು. ಕೂಫಾದ ಪ್ರಜೆಗಳು ಯಜೀದನ ಕ್ರೂರ ದುರಾಡಳಿತಕ್ಕೆ ಬೇಸತ್ತು ತಮ್ಮನ್ನು ರಕ್ಷಿಸಬೇಕೆಂದು ಹಜರತ್ ಇಮಾಮ ಹುಸೇನರಿಗೆ ವಿನಂತಿಸಿ ಪತ್ರ ಬರೆದರು. ಹಜರತ್ ಇಮಾಮ ಹುಸೇನರು ಯಜೀದನ ದುರಾಡಳಿತ ಕೊನೆಗೊಳಿಸಿ ಅಲ್ಲಿನ ಪ್ರಜೆಗಳ ಕಲ್ಯಾಣಕ್ಕಾಗಿ ತನ್ನ ಪ್ರಾಣವನ್ನೇ ತ್ಯಾಗ ಮಾಡಲು ಸಿದ್ಧನಾದನು. ಯಜೀದನೊಡನೆ ಯುದ್ಧಮಾಡಲು ಹತ್ತಿರದ ಬಂಧುಗಳು, ಹೆಂಡತಿ ಮಕ್ಕಳೊಂದಿಗೆ ಕೂಫಾ ಪಟ್ಟಣಕ್ಕೆ ಪ್ರಯಾಣ ಬೆಳೆಸಿದರು.

ಹಿಜಿರಿ ಸನ್ ೬೧ರ ಮೊಹರಂ ತಿಂಗಳ ಕ್ರಿ.ಶ ೬೮೦ ರ ಒಂದನೆಯ ತಾರೀಖಿ□ನಂದು ಇರಾಕ್ ಪ್ರಾಂತವನ್ನು ತಲುಪಿದನು. ಐದನೆಯ ದಿನ ಅರೇಬಿಯಾ ರಾಜ್ಯದ □ಕರ್ಬಲಾ□ ಮರಭೂಮಿಗೆ ಬಂದಿಳಿದರು. ಕ್ರೂರಿ, ಧರ್ಮ ವಿರೋಧಿಯಾದ □ಯಜೀದನ ಸೈನ್ಯ□ ಮತ್ತು □ಹಜರತ್ ಇಮಾಮ ಹುಸೇನ್□ ರ ನಡುವೆ ಘೋರ ಯುದ್ಧ ನಡೆಯಿತು. ಈ ಯುದ್ಧವು ಸುಮಾರು ಹತ್ತು ದಿವಸಗಳವರೆಗೆ ನಡೆಯಿತು. ಈ ಯುದ್ಧದಲ್ಲಿ ನಡೆದ ಘಟನೆಗಳನ್ನಾಧರಿಸಿ ರಿವಾಯತ್ ಪದಗಳನ್ನು ರಚಿಸಿದ್ದಾರೆ.

## ರಿವಾಯತ್ ಪದಗಳ ರಚನೆ :

ಕರಜಗಿಯ ರಿವಾಯತ್ ಪದಕಾರರು ಕನ್ನಡ ಭಾಷೆಯಲ್ಲಿ ಪದಗಳನ್ನು ರಚಿಸಿದರೂ ಇವುಗಳಲ್ಲಿ ಉರ್ದು, ಮರಾಠಿ, ಇಂಗ್ಲೀಷ್ ಪದಗಳು ಹೇರಳವಾಗಿ ಬಳಸಿಕೊಂಡಿದ್ದಾರೆ.

ಮೊಹರಂ ಹಬ್ಬದ ಸಂದರ್ಭಕ್ಕೂ ಮೊದಲು ಈ ಪದಗಳನ್ನು ರೂಢಿಮಾಡಿ ಹಾಡುತ್ತಿದ್ದರು. ಮೊಹರಂ ಪದಗಳನ್ನು ಹೇಳುವ ಮೊದಲು □ಗಣಪತಿ□ಯನ್ನು ಕುರಿತಾದ ಪದವನ್ನು ಹಾಡುತ್ತಿದ್ದರು. ನಂತರ □ಸಲಾಮಿ ಪದ□ವನ್ನು ಹಾಡಿ ರಿವಾಯತ್ ಪದವನ್ನು ಹಾಡುತ್ತಿದ್ದರು.

ಫತ್ತುಮಿಯರ ಸಲಾಮಿ ಪದ ಈ ಕೆಳಗಿನಂತೆ ಪ್ರಾರಂಭವಾಗುತ್ತಿತ್ತು.
□ ಶರಣಾರ್ಥಿ ಸಭೆಕ ಮೊದಲಾ ಮಾಡುವೆನಲ್ಲಾ ಸಣ್ಣ ದೊಡ್ಡ ದೈವಕೆಲ್ಲಾ
ಕೈಯ ಮುಗಿದು ನಿಂತಿನಿ ಬಾಲಾ ಸ್ವಲ್ಪ ಹೊತ್ತ ಮಾಡ ಬ್ಯಾಡರಿ ಗುಲ್ಲಾ
ಚಿತ್ತಿಟ್ಟು ಕೇಳಿರಿ ಹಿರಿಯರೆಲ್ಲಾ□

ಈ ರೀತಿಯಾಗಿ ಕನ್ನಡ ನುಡಿಯನ್ನು ಹೇಳಿ ಮರಾಠಿ, ತಲುಗು, ಮಲಯಾಳಂ, ಉರ್ದು ಮುಂತಾದ ಭಾಷೆಯಗಳಲ್ಲಿ ಒಂದೊಂದು ನುಡಿಯಲ್ಲಿ ಸಲಾಮಿ ಹೇಳುತ್ತಾರೆ. ಕೊನೆಯಲ್ಲಿ ಈ ಕೆಳಗಿನಂತೆ ಹೇಳಿ ಸಲಾಮಿ ಪದ ಮುಗಿಸುತ್ತಾರೆ.


□ ಕರಜಗಿ ಊರ ಅಸಲ ಇಲ್ಲಿ ನೆನದಾನಲ್ಲಾ ಜಿನ್ನೆಸಾಬ
ದಯಾ ನಮ್ಮಮ್ಯಾಲ ಫತ್ತುಮಿಯಾ ವಸ್ತಾದ ಅಸಲಾ
ಕವಿಗೋಳು ರಂಗಲಾಲ ನಮಸ್ಕಾರ ದೈವಕೆಲ್ಲಾ.□

ಫತ್ತುಮಿಯಾರು ಒಂದು ನೂರಕ್ಕೂ ಹೆಚ್ಚು ರಿವಾಯತ್ ಪದಗಳನ್ನು ರಚಿಸಿದ್ದಾರೆ. ಅವರ ಒಂದು ಪದದ ನುಡಿ ಈ ಕೆಳಗಿನಂತಿದೆ.

□ ಮಹ್ಮದನೀಫ ಜಂಗ ಮಾಡ್ಯಾನ ಕೇಳಿರಿ ಸಮಾಧಾನಾ ।
ವರೂವಾಗಿ ಅವರಿಗಿ ಗುರುವ ನಡಿಸಿಕೊಟ್ಟ ಭಗವಾನಾ
ಸಾಮರ್ಥ್ಯ ಶಕ್ತಿ ಬೇಡಿ ಕೈವೊಡ್ಡಿ ಬಂದು ನಿಂತೊ ಪೂರಮಾನಾ
ಹಡದ ತಾಯಿ ಮಲಿಯ ಹಾಲಗಟ್ಟಿ ಹುಟ್ಟಿದ ಯಾಳೆ ಗುಣಾ ॥
ಛತ್ತೀಸಕೋಟಿ ದೇವರೊಳಗ ಮರ್ದ ಅನಸ್ಯಾನಾ
ವೈರಿ ಮದದಂಡಿನವೊಳಗ ಪುಂಡ ಅನಸ್ಯಾನೊ ಹನೀಪ ಬಲವಾನಾ
ಹೆಂತ ಕಠಿಣ ಲಡಾಯಿ ಮಾಡಿ ಹೋಗ್ಯಾನ ಸೈನ ಶಕ್ತಿವಾನಾ□

ಈ ರಿವಾಯತ್ ಪದವು ಒಟ್ಟು ಒಂಬತ್ತು ನುಡಿಗಳನ್ನು ಒಳಗೊಂಡಿದೆ. ಇದು ಮಹ್ಮದ ಹನೀಫ್ ನು ಯಾವ ರೀತಿ ಯುದ್ಧ ಮಾಡುತ್ತಾನೆ ಎಂಬುದು ವರ್ಣಿಸುತ್ತದೆ.


ಫತ್ತುಮಿಯಾರವರು ಈ ಪದಗಳನ್ನು ತಮ್ಮ ಶಿಷ್ಯ ವರ್ಗದವರನ್ನು ಕಟ್ಟಿಕೊಂಡು ಮೊಹರಂ ಸಂದರ್ಭದಲ್ಲಿ ಹಾಡುತ್ತಿದ್ದರು. ಅವರ ಶಿಷ್ಯ ಪರಂಪರೆ ಈ ರೀತಿಯಾಗಿದೆ.




[illegible] ಇವರು ಇವರ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅಲ್ಲಾವುದ್ದೀನ್ ಉರ್ಫ ಸಾಹೇಬ ಪಾಷಾ ರ ಒಂದು ರಿವಾಯತ್ ಪದದ ನುಡಿ ಈ ಕೆಳಗಿನಂತಿದೆ.

□ಏನ ಶಿಸ್ತ ಸುತಮುತ ಕುಂತಿರಿ ಈ ಪರಿತ
ಕತಿವೊಂದ ತಿಳಿಸುವೆ ನಾ
ಮದಿನೆ ಶಾರದಾಗ ಹುಟ್ಟಿ ಬಂದಾರ ಆಗ
ಚಂದ್ರನ ಕಿರಣ ತ್ರಿಮೂರ್ತಿ ಸದೋಲೋಕ ನಬಿಶರಣ ಅವರಿಗಿತ್ತು ಬಡತನ।
ನಿತ್ಯನೇಮ ಶಿವನಾಮ ಅವರಲ್ಲಿ ಇದ್ದಿತೋ ಧರ್ಮ ನೆನವೂತ ಅಲ್ಲಾನಾ।
ಪರಿಪರಿ ಏಜಿದರೋ ಅವರೀಗಿ ಗುರಿ ಹತ್ಯಾರೋ ಅವರ ಬೆನ್ನ।
ಧರ್ಮದ ಕಾಲಾಗ ಹೂಡಿತ್ತೋ ಕದನ ರಣ ಆಡಿ ಕೊಂದಾರೋ ಅಬುಜಹಲನಾ□।

ಈ ಪದದಲ್ಲಿ ಕರ್ಬಲಾ ಕದನದ ವರ್ಣನೆಯನ್ನು ಮಾಡಲಾಗಿದೆ.
ಇವರ ಶಿಷ್ಯ ಪರಂಪರೆ ಈ ಕೆಳಗಿನಂತಿದೆ.




ಮೀರ[illegible]

□ಕುಂತ ಸಭಾದಾಗ ನಿಂತ ಹೇಳತೀನಿ
ಚಿತ್ತಿಟ್ಟು ಕೇಳರಿ ಜಂಗ ಕರ್ಬಲಾ।
ಕರಬಲದ ವಳಗ ಇಮಾಮೇ ಹುಶೇನೀದು ಮೀರಿತ್ತೊ ಯತನಾ
ಅನ್ಯವಿಲ್ಲದೆ ಜುಲ್ಮಿ ಮಾಡಿದ। ಎಜಿದ ಹೈವಾನಾ।
ಎಂಥಾ ದುಷ್ಟ ಕೆಟ್ಟವನಾ ನೀರ ಬಂದ ಮಾಡ್ಯಾನಾ ॥
ಅನ್ನ ನೀರವಿಲ್ಲದೆ ನೀರ ನಿರಧಾರಾ ಇದ್ದರೊ ಒಂಬತ್ತ ದಿನಾ□॥

ಈ ರಿವಾಯತ್ ಪದದಲ್ಲಿ ಹಜರತ್ ಇಮಾಮ್ ಹುಸೇನ್ ರು ಕರ್ಬಲಾ ಮೈದಾನದಲ್ಲಿ ಯುದ್ಧ ಮಾಡುವಾಗ ಯಜೀದನು ಅವರಿಗೆ ನೀರು ಸಿಗದಂತೆ ಮಾಡಿರುತ್ತಾನೆ. ಹತ್ತಿರದಲ್ಲೇ □ಯುಫ್ರಟಿಸ್□ನದಿ ಹರಿಯುತ್ತಿದ್ದರೂ ಅದಕ್ಕೆ ಕಾವಲಿರಿಸಿರುತ್ತಾನೆ. ಇಲ್ಲಿ ಹಜರತ್ ಹುಸೇನ್ ರ ಒಳ್ಳೆಯ ಗುಣ ಹಾಗೂ ಯಜೀದನ ದುಷ್ಟ ಗುಣಗಳ ವರ್ಣನೆ ಇದೆ.
ಮೀರಾಸಾಬರ ಶಿಷ್ಯ ಪರಂಪರೆ ಈ ಕೆಳಗಿನಂತಿದೆ.

ಬೀರಾಸಾಬ (ವಸ್ತಾದರು)

ಸಾಹೇಬಲಾಲ ಮುಲುಜಕರ(ಬೋರಗಿ) ಈರಗೊಂಡಪ್ಪ ಬಿರಾದಾರ(ಬೋರಗಿ) ಸುಲ್ತಾನಸಾಬ ಸಾರವಾಡ(ಬೋರಗಿ)

ವೀರಾಸಾಬರ ಎರಡನೆಯ ಮಗನಾದ ಬಂದಗಿಸಾಬ ಮುಲ್ಲಾರವರು ತಂದೆಯ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ಅವರೂ ಸಹ ರಿವಾಯತ್ ಪದಗಳನ್ನು ರಚಿಸಿ ತಮ್ಮ ಶಿಷ್ಯವರ್ಗದೊಂದಿಗೆ ಹಾಡುತ್ತಿದ್ದರು. ಅವರ ಒಂದು ರಿವಾಯತ್ ಪದದ ನುಡಿ ಈ ಕೆಳಗಿನಂತಿದೆ.

□ಮಕ್ಕಾ ಮದಿನಾ ಅರಬಸ್ತಾನಾ। ಮಹಮ್ಮದ ಪೈಗಂಬರ ಖಾಸ ಅವರ ವತನಾ।
ಅವರ ಮಗಳ ಬೀಬಿ ಫಾತಿಮಾ। ಪ್ರೇಮದ ಮಡದಿ ಅಲಿ ಮೌಲಾನಾ।
ಎರಡು ಮಕ್ಕಳ ಇದ್ದಾವ ಮೋಹನ। ಜೋಡಿಲೇ ಇದ್ದಾರ ಹಸನ್ ಹುಸೇನಾ॥
ಅವರ ಹಿಂಬಾಲಾ ಇತ್ತ ಬಡತನಾ। ಬಡತನ ಇದ್ದರ ಮರಿಲಿಲ್ಲ ಸಂಭನಾ॥
ಐದು ಹೊತ್ತ ನಮಾಜ ತಪ್ಪದೆ ನೇಮ ಹಗಲಿರಳು ಮನದಲ್ಲಿ ಗುರುವಿನ ಧ್ಯಾನಾ।
ಆಪತ ಬಂದಾಗ ಆನಂದ ಜೀವನ। ಸದಾಕಾಲ ಅವರ ಮೇಲೆ ಸಂಭನ ಕರುಣ□॥

ಈ ಪದದಲ್ಲಿ ಮಹಮ್ಮದ ಪೈಗಂಬರರ ಧರ್ಮ ಪಾಲನೆ ಹಾಗೂ ಬಡತನ ಕುರಿತು ವರ್ಣನೆ ಮಾಡಲಾಗಿದೆ.
ಬಂದಗಿಸಾಬರ ಶಿಷ್ಯವರ್ಗ ಈ ಕೆಳಗಿನಂತಿದೆ.

ಬಂದಗಿಸಾಬ(ವಸ್ತಾದರು)

ಭೀಮಶ್ಯಾ ಬಾಮಣೆ | ಗೈಬಿಸಾಬ ಶೇಖ | ಲಾಯಪ್ಪ ಕಾಂಬಳ | ಮಾಳಪ್ಪ ಬಸರಗಿ | ದುಂಡಪ್ಪ ಕಾಂಬಳೆ | ಅಡಿವೆಪ್ಪ ಕೋಳಿ

ಈಗ ಮೊಹರಂ ಹಬ್ಬದಲ್ಲಿ □ಭತ್ತುಮಿಯಾ ಮೇಳ□ ಮತ್ತು □ಮೀರಾಸಾಬನ ಮೇಳ□ ಎಂದು ಎರಡು ಮೇಳಗಳನ್ನು ಕಟ್ಟಿಕೊಂಡು ರಿವಾಯತ್ ಪದಗಳನ್ನು ಹಾಡುತ್ತಾರೆ. ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಇವರ ಹೆಸರಿನಲ್ಲಿ ರಿವಾಯತ್ ಮೇಳಗಳನ್ನು ಕಟ್ಟಿಕೊಂಡು ತಮ್ಮ ತಮ್ಮ ಗ್ರಾಮಗಳಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ರಿವಾಯತ್ ಪದಗಳನ್ನು ಹಾಡುತ್ತಿದ್ದಾರೆ. ಈ ಪರಂಪರೆಯು ಹೀಗೆಯೇ ಮುಂದುವರೆಯಲಿ ಎಂದು ಆಶಿಸೋಣ.

**ಗ್ರಂಥ ಋಣ :**


- ಬೀದರ ಜಿಲ್ಲೆಯ ಮೊಹರಮ್ ಪದಗಳು, ಸಂ. ಚಂದ್ರಪ್ಪ ಹೆಬ್ಬಾಳಕರ, ಮರಿಯಪ್ಪ ಹೊಸಮನಿ, ೨೦೦೯, ಧರಿನಾಡು ಕನ್ನಡ ಸಂಘ, ಕೇಂದ್ರ ಸಮಿತಿ ಬೀದರ್.
- ಹೆಜ್ಜೆ ಪದಗಳು, ಡಾ. ದಸ್ತಗೀರ ಅಲ್ಲೀಭಾಯಿ, ೧೯೯೯, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಜಾನಪದ ಸಾಹಿತ್ಯ ಸಂಗಾತಿ, ಡಾ. ಚಿ.ಸಿ.ನಿಂಗಣ್ಣ, ೨೦೧೨, ಕಾವ್ಯ ಕಿರಣ ಪ್ರಕಾಶನ, ಗುಲಬರ್ಗಾ.
- ಜಾನಪದ ಅಧ್ಯಯನ, ದೇಜಗೌ, ೨೦೧೫, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.
- ರಿವಾಯತ ಪದಗಳು, ಸಂ.ಡಾ.ಎಂ.ಎನ್.ವಾಲಿ, ಅಲ್ಲಾಬಕ್ಷ.ಎಂ.ಮಿರ್ಜಿ, ೨೦೧೧, ಭುವನೇಶ್ವರಿ ಪ್ರಕಾಶನ, ವಿಜಾಪುರ.





ಗಣೋರೆ ಜಗನ್ನಾಥ ದತ್ತಾತ್ರೇಯ
ಸಂಶೋಧನಾ ವಿದ್ಯಾರ್ಥಿ ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ-೬

# Publish Research Article
# International Level Multidisciplinary Research Journal For All Subjects

Dear Sir/Mam,

We invite unpublished Research Paper,Summary of Research Project,Theses,Books and Book Review for publication,you will be pleased to know that our journals are

## Associated and Indexed,India

- International Scientific Journal Consortium
- OPEN J-GATE

## Associated and Indexed,USA

- EBSCO
- Index Copernicus
- Publication Index
- Academic Journal Database
- Contemporary Research Index
- Academic Paper Databse
- Digital Journals Database
- Current Index to Scholarly Journals
- Elite Scientific Journal Archive
- Directory Of Academic Resources
- Scholar Journal Index
- Recent Science Index
- Scientific Resources Database
- Directory Of Research Journal Indexing



Golden Research Thoughts
258/34 Raviwar Peth Solapur-413005,Maharashtra
Contact-9595359435
E-Mail-ayisrj@yahoo.in/ayisrj2011@gmail.com
Website : www.aygrt.isrj.org